ಅಧ್ಯಕ್ಷರು : ಮೊದಲಿಗೆ ಪ್ರಶ್ನೋತ್ತರಗಳು. ಏನಿದು, ಮಂತ್ರಿಗಳು ಯಾರೊಬ್ಬರೂ ಕಾಣುತ್ತಿಲ್ಲ. What is this? ಹೀಗಾದರೆ ಸದನ ನಡೆಸುವುದು ಹೇಗೆ?

ಶ್ರೀ ಬಂಡೆಪ್ಪ ಖಾಶೆಂಪೂರ್ : ಪ್ರಶ್ನೋತ್ತರವೆಂದು ತಾವು ಹೇಳಿದ್ದೀರಿ. ಯಾವೊಬ್ಬ ಮಂತ್ರಿಗಳೂ ಹಾಜರಿಲ್ಲ. ಈ ಸರ್ಕಾರದಲ್ಲಿ ಮಂತ್ರಿಗಳು ಯಾವ ರೀತಿ ಸ್ಪಂದಿಸುತ್ತಿದ್ದಾರೆ. ಎನ್ನುವುದನ್ನು ತಾವು ನೋಡಬೇಕು. ಹಿಂದೆ ಒಬ್ಬರು ಮಂತ್ರಿಗಳು (ಸುನಿಲ್ ವಲ್ಯಾಪುರೆ) ಇದ್ದಾರೆ.

(ಗೊಂದಲ)

ಅಧ್ಯಕ್ಷರು : ಆಯಿತು, ಈಗ ಕರೆಸುವುದಕ್ಕೆ ಹೇಳುತ್ತೇನೆ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : Front bench ನಲ್ಲಿ ಒಬ್ಬರೂ ಇಲ್ಲ. ಈ ಸರ್ಕಾರಕ್ಕೆ ಅಸೆಂಬ್ಲಿ ನಡೆಸುವುದಕ್ಕೆ ಎಷ್ಟು ಆಸಕ್ತಿ ಇದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಮೊದಲನೇ ಪ್ರಶ್ನೆಗೆ ಉತ್ತರಿಸಲು ಮಂತ್ರಿಗಳು ಇದ್ದಾರೆ. ಸಂಗೇಮೇಶ್ವರ್‌ರವರು ಪ್ರಶ್ನೆ ಕೇಳಬೇಕು.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : Front bench ನಲ್ಲಿ ಒಬ್ಬರಾದರೂ ಬೇಕಲ್ಲವೇ? ಬರಗಾಲದ ಬಗ್ಗೆ. ರೈತರ ಬಗ್ಗೆ ಎಲ್ಲದರ ಬಗ್ಗೆ ಚರ್ಚೆಯಿದೆ. ಇಬ್ಬರು ಡೆಪ್ಯುಟಿ ಸಿ.ಎಂ. ಇದ್ದಾರೆ ಒಬ್ಬರಾದರೂ ಕಂಪಲ್ಸರಿಯಾಗಿ ಇಲ್ಲಿ ಇರಬೇಕು.

(ಗೊಂದಲ)

ಅಧ್ಯಕ್ಷರು : ಆಯಿತು, ಬಂದವರಲ್ಲ

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈ ರೀತಿ ಸದನ ನಡೆಸಿದರೆ ಹೇಗೆ? ಇದು ಸದನಕ್ಕೆ ಅಗೌರವವಾಗುತ್ತದೆ. ಅಸೆಂಬ್ಲಿ ನಡೆಸುವುದು ಏಕೆ?

ಮುಖ್ಯಮಂತ್ರಿಗಳೇ, ನಿಮ್ಮ ಕೊಲೀಗ್ಸ್‌ಗೆ ಸ್ವಲ್ಪ ಹೇಳಿ. ಅವರು ನಿಮ್ಮ ಮಾತನ್ನು ಕೇಳುವುದಿಲ್ಲವೇ, ಹೇಗೆ ?

ಅಧ್ಯಕ್ಷರು : Chief Whip ರವರು ಬಂದು ನೋಡಬೇಕು. ನೀವು ಬಂದು ಅಲ್ಲಿ ಸುಮ್ಮನೆ ಕುಳಿತುಕೊಳ್ಳುತ್ತೀರಿ. ಸಭಾನಾಯಕರೂ ಇದ್ದೀರಿ. ಏಕೆ ಹೀಗೆ? ಇದು ಸರಿಯಲ್ಲ. ಸದನ ನಡೆಸುವುದಕ್ಕೆ ಆಗುವುದಿಲ್ಲವೆಂದರೆ ನಡೆಸುವುದು ಬೇಡ.

ಶ್ರೀ ಸಿದ್ದರಾಮಯ್ಯ : ಮುಖ್ಯಮಂತ್ರಿಗಳೇ ನೀವು ಬಂದಿದ್ದೀರಿ. ಕಂದಾಯ ಮಂತ್ರಿಗಳಿಲ್ಲ. Agriculture Minister ಇಲ್ಲ, Animal Husbandary Minister ಇಲ್ಲ. Sericulture Minister ಇಲ್ಲ Co-operate Minister ಇಲ್ಲ ಇವರೆಲ್ಲ ಎಲ್ಲಿ ಹೋಗುತ್ತಾರೆ ?

ಅಧ್ಯಕ್ಷರು : ಇದು ನಿಮ್ಮ (Chief Whip) ಜವಾಬ್ದಾರಿ.

ಶ್ರೀ ಎಸ್. ಸುರೇಶ್ ಕುಮಾರ್ : ಪ್ರಶ್ನೋತ್ತರ ವೇಳೆಗೆ ಸಂಬಂಧಪಟ್ಟ ಪ್ರವಾಸೋದ್ಯಮ ಸಚಿವರಿದ್ದಾರೆ.

ಶ್ರೀ ಸಿದ್ದರಾಮಯ್ಯ : ಹಾಗಿದ್ದರೆ ಬೇರೆ ಮಿನಿಸ್ಟರ್‌ಗಳು ಬರುವುದು ಬೇಡವೇ?

ಶ್ರೀ ಎಸ್. ಸುರೇಶ್ ಕುಮಾರ್ : ಬರುತ್ತಾರೆ. It is a question hour, ಮುಖ್ಯಮಂತ್ರಿಗಳೂ ಬಂದಿದ್ದಾರೆ. ನಿಮ್ಮ ಡಿಬೇಟ್ ಟೈಂನಲ್ಲಿ ಎಲ್ಲರೂ ಕೂಡ ಬರುವ ಹಾಗೆ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : Question hourನಲ್ಲಿ ಉತ್ತರ ಹೇಳಬೇಕಾದ ಮಂತ್ರಿಗಳೆಲ್ಲರೂ ಇದ್ದಾರೆಯೇ?

ಶ್ರೀ ಎಸ್. ಸುರೇಶ್ ಕುಮಾರ : ಈಶ್ವರಪ್ಪನರೊಬ್ಬರು ಬರಬೇಕು. ಬರುತ್ತಿದ್ದಾರೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮತ್ತೊಂದು ವಿಷಯ. Performance report ಇನ್ನೂ ಬಂದಿಲ್ಲ. ಅವುಗಳನ್ನು ತರಿಸಿಕೊಡಿ ಎಂದು ನೀವು ಶುಕ್ರವಾರವೇ ಹೇಳಿದ್ದೀರಿ. ವಾರ್ಷಿಕ ವರದಿಯೂ ಬಂದಿಲ್ಲ, performance report ಸಹಾ ಬಂದಿಲ್ಲ. ಹೀಗಿರುವಾಗ ನಾವು ಡಿಮ್ಯಾಂಡ್ಸ್ ಮೇಲೆ ಯಾವ ರೀತಿ ಚರ್ಚೆ

ಮಾಡಬೇಕು. ನೀವು ಅಜೆಂಡಾದಲ್ಲಿ ಎಲ್ಲ ಡಿಮ್ಯಾಂಡ್ಸ್ ಹಾಕಿದ್ದೀರಿ. ಮುಖ್ಯಮಂತ್ರಿಗಳು ಗಮನಿಸಬೇಕು. ನಿಮ್ಮ performance ಇಲ್ಲವೆಂದರೆ ನಾವು ಹೇಗೆ assess ಮಾಡಬೇಕು?

ಶ್ರೀ ವೆಂಕಟರಾವ್ ನಾಡಗೌಡ : ಅವು ಬರಲಿಲ್ಲವೆಂದರೆ ನಾವು ಹೇಗೆ ಚರ್ಚೆ ಮಾಡಬೇಕು?

(ಗೊಂದಲ)

ಅಧ್ಯಕ್ಷರು : ಇವತ್ತು ಕೊಡಿ.

ಶ್ರೀ ಜಗದೀಶ ಶೆಟ್ಟರ್ : Submit ಮಾಡುತ್ತೇವೆ.

ಅಧ್ಯಕ್ಷರು : ನಿನ್ನೆಯೇ ಕೊಡುವುದಕ್ಕೆ ಹೇಳಿದ್ದವು.

ಶ್ರೀ ಜಗದೀಶ್ ಶೆಟ್ಟರ್ : ಆಯಿತು, ಕೊಡುತ್ತೇವೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಅಧ್ಯಕ್ಷರೆ, ನಾಳೆ ಕೊಡುತ್ತಾರೆಯೇ, ಇಲ್ಲವೇ ಕೇಳಿ.

ಶ್ರೀ ಸಿದ್ಧರಾಮಯ್ಯ : ನೀವು 19ನೇ ತಾರೀಖಿನಂದೇ ಡಿಮ್ಯಾಂಡ್ಸ್, ಮಂಡನೆ ಮಾಡಿದಿರಿ. ಅವುಗಳನ್ನು ಕೊಡಲು ಆವತ್ತಿನಿಂದ ಇವತ್ತಿನವರೆಗೆ ಟೈಂ ಬೇಕೆ? ಮತ್ತೆ ಯಾವ ಆಧಾರದ ಮೇಲೆ ಎಂ.ಎಲ್.ಎ.ಗಳು discussionನಲ್ಲಿ participate ಮಾಡಬೇಕು? Performance ಪುಸ್ತಕ ಇಲ್ಲದೇ ಹೋದರೆ ಹೇಗೆ? ಇವರು ಏನು ಮಾಡಿದ್ದಾರೆ ಎನ್ನವುದು ಗೊತ್ತಾಗುವುದು ಹೇಗೆ? ದುಡ್ಡು ಹೇಗೆ ಖರ್ಚು ಮಾಡಿದರು, ಅಲ್ಲಿ ಎಲ್ಲಿ ಹೋಯಿತು, ಯಾರು ತಿಂದುಕೊಂಡಿದ್ದಾರೆ, ಇವೆಲ್ಲವೂ ಗೊತ್ತಾಗುಬೇಕಲ್ಲವೇ? ಬಗಲಿಯವರು ಡಾಕ್ಟರ್ ಆಗಿದ್ದರು, ಅವರಿಗೆ ಔಷಧಿ ಬೆಲೆ ಗೊತ್ತಿತ್ತು. ನಿನ್ನೆ ತೆಗೆದುಕೊಂಡು ಬಂದರು. ಅವೆಲ್ಲ ನಮಗೆ ಹೇಗೆ ಗೊತ್ತಾಗುತ್ತದೆ? ಡಿಮ್ಯಾಂಡ್ಸ್ ಇಡುವ ದಿನವೇ, ಅದರ ಜೊತೆಯಲ್ಲೇ performance reportಅನ್ನು ಇಡಬೇಕು. ಅವು ಮುಂಚೆಯೇ ಸಿದ್ದವಾಗಿರಬೇಕು. Demands ಇಡುವ ದಿನವೇ ಅದರ ಜೊತೆಯಲ್ಲೇ ಅದನ್ನು ಇಡಬೇಕು. ಅದು ಮುಂಚಿತವಾಗಿ prepare ಆಗಿರಬೇಕು. Demands ಮೇಲೆ ಚರ್ಚೆ ಮಾಡದೆ ಕೋಟಗಟ್ಟಲೆ ಹಣವನ್ನು ಅವರಿಗೆ ನಾವು ಹೇಗೆ approve ಮಾಡಿಕೊಡುವುದು? ನಾವು ಒಪ್ಪಿಕೊಳ್ಳುವುದು

ಹೇಗೆ? ಸುಮ್ಮನೆ ಕಣ್ಣುಮುಚ್ಚಿಕೊಂಡು ಒಪ್ಪಿಗೆ ಕೊಟ್ಟಬಿಡುವುದೇ? ಇವೆಲ್ಲಾ ಮಾಡಬೇಕಾಗಿರುವಂಥವು. it is mandatory on the part of the Government. ಅವರಿಗೆ ಸ್ವಲ್ಪ ಚುರುಕು ಮುಟ್ಟಿಸಿ.

ಅಧ್ಯಕ್ಷರು : Ratify ಮಾಡಿ.

SRI SIDDARAMAIAH : Mr. Savadi, it is not Eshwarappa. Performance report ಗಳನ್ನು ಕೊಡಬೇಕಲ್ಲ? ಅವನ್ನೇ ಕೊಟ್ಟಿಲ್ಲ. ನಿಮ್ಮ ಹತ್ತಿರ ಇವೆಯೇ?

ಅಧ್ಯಕ್ಷರು : ಅದಲ್ಲ, ಆವರು ಮಂತ್ರಿಗಳ ಗೈರು ಹಾಜರಿ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಗೈರು ಹಾಜರಿ ಬೇರೆ. Performance report ಕೊಡದಿರುವುದು ಇದು important ಅಲ್ಲವೇ? MLA ಗಳು ಯಾವುದರ ಬಗ್ಗೆ ತಯಾರಾಗಿ ಬರಬೇಕು?

ಅಧ್ಯಕ್ಷರು ; ಆಯಿತು, ಇವತ್ತೇ ಕೊಡುವುದಕ್ಕೆ ವ್ಯವಸ್ಥೆ ಮಾಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಮುಖ್ಯಮಂತ್ರಿಯವರೆ, MLA ಗಳು ತಯಾರಾಗಿ ಬರಬೇಕೆ, ಬೇಡವೇ? ಇನ್ನುಳಿದಿರುವುದು ಎರಡೇ ದಿವಸ. ನೀವು 27ನೇ ತಾರೀಖು ಉತ್ತರ ಕೊಡುತ್ತೇನೆ ಎಂದು ಹೇಳುತ್ತೀರಿ. ನೀವು ಯಾವತ್ತು ಕೊಡುತ್ತೀರಿ ಹೇಳಿ?

ಶ್ರೀ ಜಗದೀಶ್ ಶೆಟ್ಟರ್ : ಕೂಡಲೇ ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ, ನೀವು performance report ಕೊಟ್ಟ ಮೇಲೆ ಒಂದು ವಾರ ಮುಂದಕ್ಕೆ ಹಾಕಿ. ನೋಡಿ ಈ ತರಹವಾದರೆ, I tell you, it is very bad. it is not correct.